# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

ನವನಗರ, ಹುಬ್ಬಳ್ಳಿ– 580025

ನ್ಯಾಕ 'ಎ' ಶ್ರೇಣಿ ಮಾನ್ಯತೆ

ದೂರವಾಣಿ ಸಂಖ್ಯೆ : 0836–2222392
ಫ್ಯಾಕ್ಸ್ : 0836–2223392

ಜಾಲತಾಣ :www.kslu.karnataka.gov.in
ಇ–ಮೇಲ್ :kslu.registrar@gmail.com


ಸಂಖ್ಯೆ: ಕರಾಕಾವಿ/ಸಿಆಸುಇ/2023–24/3312

ದಿನಾಂಕ: 13.03.2024.

## ನೇಮಕಾತಿ ಅಧಿಸೂಚನೆ

**ವಿಷಯ:** ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯಲ್ಲಿ 371(ಜೆ) ಕಲ್ಯಾಣ ಕರ್ನಾಟಕದ (ಸ್ಥಳೀಯ ವೃಂದದಲ್ಲಿ) ಲಭ್ಯವಿರುವ ಬೋಧಕೇತರ ಹುದ್ದೆಗಳನ್ನು ತುಂಬಲು ಅರ್ಹ ಸ್ಥಳೀಯ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸುವ ಕುರಿತು.

**ಉಲ್ಲೇಖ:** 1) ಸರ್ಕಾರದ ಪತ್ರ ಸಂಖ್ಯೆ: ಲಾ ಹೆಚ್‌ಆರ್ ಎಂ/56/2022 ದಿನಾಂಕ: 20.01.2023.

2) 97ನೇ ಸಿಂಡಿಕೇಟ ಸಭೆಯ ನಡಾವಳಿಗಳು, ಕಲಂ ಸಂಖ್ಯೆ: 04, ದಿನಾಂಕ: 27.08.2023.

3) ಈ ಕಛೇರಿ ಪತ್ರ ಸಂಖ್ಯೆ: ಕರಾಕಾವಿ/ಸಿ.ಆ.ಸು.ಇ./2023–24/1350 ದಿನಾಂಕ: 06.09.2023.

4) ಸರ್ಕಾರದ ಪತ್ರ ಸಂಖ್ಯೆ: ಲಾ–ಕೆಎಲ್‌ಎಮ್/79/2023 ದಿನಾಂಕ: 22.01.2024.

5) 100ನೇ ಸಿಂಡಿಕೇಟ ಸಭೆಯ ನಡಾವಳಿಗಳು, ಹೆಚ್ಚುವರಿ ಕಲಂ ಸಂಖ್ಯೆ: 02, ದಿನಾಂಕ: 02.03.2024.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯಲ್ಲಿ ಖಾಲಿ ಇರುವ ಈ ಕೆಳಗೆ ಕಾಣಿಸಿದ ಬೋಧಕೇತರ ಹುದ್ದೆಗಳಿಗೆ ಭಾರತೀಯ ನಾಗರೀಕರಿಂದ ನಮೂನೆಯ 8(ಎಂಟು) ಪ್ರತಿಗಳಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ ಸಂ | ಹುದ್ದೆಯ ಪದನಾಮ | ವೇತನ ಶ್ರೇಣಿ | 371(ಜೆ) ಹೈದ್ರಾಬಾದ ಕರ್ನಾಟಕ (ಸ್ಥಳೀಯ ವೃಂದ) ಕಲ್ಯಾಣ ಕರ್ನಾಟಕ ಹುದ್ದೆಗಳ ಸಂಖ್ಯೆ | ಪ್ರವರ್ಗವಾರು ಅರ್ಹತೆ |
|---|---|---|---|---|
| 01 | ಉಪಕುಲಸಚಿವರು | 67550–104600 | 01 | ಮೀಸಲು ಇರುವುದಿಲ್ಲ ಮೇರಿಟ ಆಧಾರದ ಮೇಲೆ. |
| 02 | ಸಹಾಯಕ ಕುಲಸಚಿವರು | 52650–97100 | 01 | ಮೀಸಲು ಇರುವುದಿಲ್ಲ ಮೇರಿಟ ಆಧಾರದ ಮೇಲೆ. |
| 03 | ಕಛೇರಿ ಅಧೀಕ್ಷಕರು | 43100–83900 | 01 | ಮೀಸಲು ಇರುವುದಿಲ್ಲ ಮೇರಿಟ ಆಧಾರದ ಮೇಲೆ. |
| 04 | ಶೀಘ್ರಲಿಪಿಗಾರರು | 33450–62000 | 01 | ಮೀಸಲು ಇರುವುದಿಲ್ಲ ಮೇರಿಟ ಆಧಾರದ ಮೇಲೆ. |
| 05 | ಸಹಾಯಕರು | 30350–58250 | 02 | ಪ.ಜಾ. - 1 (ಇತರೆ)<br>ಸಾಮಾನ್ಯ - 1 (ಇತರೆ) |
| 06 | ಕಿರಿಯ ಸಹಾಯಕರು | 21400–42000 | 03 | ಪ.ಜಾ. - 1 (ಇತರೆ)<br>ಸಾಮಾನ್ಯ - 1 (ಇತರೆ)<br>ಪ.ಪಂ. - 1 (ಇತರೆ) |
| 07 | ವಾಹನ ಚಾಲಕರು | 21400–42000 | 01 | ಮೀಸಲು ಇರುವುದಿಲ್ಲ ಮೇರಿಟ ಆಧಾರದ ಮೇಲೆ. |

(ಪ.ಜಾ. – ಪರಿಶಿಷ್ಟ ಜಾತಿ, ಪ.ಪಂ – ಪರಿಶಿಷ್ಟ ಪಂಗಡ)

1. ಉಪ ಕುಲಸಚಿವರು / (Deputy Registrar):

ವಿದ್ಯಾರ್ಹತೆ:

Any UGC recognized University P.G. degree with 55% marks (5% relaxation for SC/ST/Cat-I) with 08 years of Teaching / Administrative experience in University/College/ or in any Central or State Governments or any local authority or in any Boards or Corporations or Government undertakings or in any public undertakings.

2. ಸಹಾಯಕ ಕುಲಸಚಿವರು / (Assistant Registrar):

ವಿದ್ಯಾರ್ಹತೆ:

Any UGC recognized University P.G. degree with 55% marks (5% relaxation for SC/ST/Cat-I) with 05 years of Teaching / Administrative experience in University/College/ or in any Central or State Governments or any local authority or in any Boards or Corporations or Government undertakings or in any public undertakings.

3. ಕಛೇರಿ ಅಧೀಕ್ಷಕರು / (Office Superintendent):

ವಿದ್ಯಾರ್ಹತೆ:

Bachelor's Degree from UGC recognized any University with 50% marks (5% relaxation for SC/ST/Cat-I) with 03 years of Administrative experience in University/College/ or in any Central or State Governments or any local authority or in any Boards or Corporations or Government undertakings or in any public undertakings.

4. ಶೀಘ್ರಲಿಪಿಗಾರರು / (Stenographer):

ವಿದ್ಯಾರ್ಹತೆ:

a) A Bachelor's Degree from a recognized University by UGC and Senior Grade Shorthand in Kannada/English or a Diploma in Commercial Practice/ Secretarial Practice with Kannada/ English Typewriting.

b) Must have passed Kannada and English Senior Grade Typewriting conducted by the Karnataka Secondary Education Examination Board and must have adequate Computer Knowledge.

### 5. ಸಹಾಯಕರು / (Assistant):

ವಿದ್ಯಾರ್ಹತೆ:

Any Degree (3 years) of a University recognized by the UGC and should possess one year Computer Course Certificate from an Institution recognized by the Government/ a registered society.

### 6. ಕಿರಿಯ ಸಹಾಯಕರು / (Junior Assistant):

ವಿದ್ಯಾರ್ಹತೆ:

Must have passed PUC or any other examination recognized as equivalent by the State Government and should possess a six month's Computer Course Certificate from an Institution recognized by the Government/a registered society.

### 7. ವಾಹನ ಚಾಲಕರು / (Driver):

ವಿದ್ಯಾರ್ಹತೆ:

a) Must have passed SSLC examination or any other examination recognized as equivalent by the State Government.

b) Must be a holder of current driving licence of light motor vehicle, having 2 years experience as a driver in any Organization/Government Institutions and a recognized first aid certificate.

**ವಯೋಮಿತಿ**

ಅಭ್ಯರ್ಥಿಯು ಕನಿಷ್ಠ 18 ವರ್ಷಗಳನ್ನು ಪೂರೈಸಿರಬೇಕು.

(ಅ) ಪ.ಜಾತಿ, ಪ.ಪಂ ಹಾಗೂ ಪ್ರವರ್ಗ–1 ಅಭ್ಯರ್ಥಿಗಳಿಗೆ ಗರಿಷ್ಠ 40ವರ್ಷಗಳ ವಯೋಮಿತಿ..

(ಆ) ಇತರೆ ಸಾಮಾನ್ಯ ಅಭ್ಯರ್ಥಿಗಳು ಗರಿಷ್ಠ 35 ವರ್ಷಗಳ ವಯೋಮಿತಿಯನ್ನು ಮೀರಿರಬಾರದು.

ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ:55. ಸೆ.ನೆ.ನಿ.2008, ದಿನಾಂಕ: 15–01–2009, ರನ್ವಯ ನಿಗದಿಪಡಿಸಲಾಗಿದೆ.

**ಸೂಚನೆ:**

- ಜನ್ಮ ದಿನಾಂಕಕ್ಕೆ ಸಂಬಂಧಿಸಿದಂತೆ, ಜನ್ಮ ದಿನಾಂಕ ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ/ ಎಸ್.ಎಸ್.ಎಲ್.ಸಿ. ವರ್ಗಾವಣೆ ಪ್ರಮಾಣ ಪತ್ರ /ಜನ್ಮ ದಿನಾಂಕವನ್ನು ತೋರಿಸುವ ದಾಖಲೆಗಳನ್ನು ಸಲ್ಲಿಸಬೇಕು.

- ಜನ್ಮ ದಿನಾಂಕ ಪ್ರಮಾಣ ಪತ್ರವು ಕಡ್ಡಾಯವಾಗಿ ಹಾಜರು ಪಡಿಸಬೇಕಾದ ಪ್ರಮಾಣ ಪತ್ರಗಳಾಗಿದ್ದು, ಮೂಲದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಕಡ್ಡಾಯವಾಗಿ ಮೂಲ ಪತ್ರವನ್ನು ಹಾಜರುಪಡಿಸಬೇಕು. ಒಂದುವೇಳೆ ಹಾಜರು ಪಡಿಸದಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.
- ಮೀಸಲಾತಿಯ ಸೌಲಭ್ಯವನ್ನು ಪಡೆದುಕೊಳ್ಳುವ ಅಭ್ಯರ್ಥಿಗಳು ತಮ್ಮ ಜಾತಿ ಪ್ರಮಾಣ ಪತ್ರಗಳನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದುಕೊಂಡಿರತಕ್ಕದ್ದು.

## ಅಭ್ಯರ್ಥಿಗಳಿಗೆ ಸಾಮಾನ್ಯ ಮಾಹಿತಿ ಮತ್ತು ಸೂಚನೆಗಳು:

- ಅನುಚ್ಛೇಧ 371(ಜೆ) ರಂತೆ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮೀಸಲಾತಿ:
  ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು 2013ಕ್ಕೆ ಸಂಬಂಧಿಸಿದಂತೆ ನೇರ ನೇಮಕಾತಿಯಲ್ಲಿ ಸ್ಥಳೀಯ ವ್ಯಕ್ತಿಯೆಂಬ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಅನುಬಂಧ-ಎ ಯಲ್ಲಿರುವ ನಮೂನೆಯಲ್ಲಿಯೇ ಅರ್ಹತಾ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದ ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಆಯುಕ್ತರಿಂದ ಪಡೆದಿಟ್ಟುಕೊಳ್ಳತಕ್ಕದ್ದು. ಮೂಲ ದಾಖಲೆಗಳು ಪರಿಶೀಲನಾ ಸಮಯದಲ್ಲಿ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದ್ದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ ಅವರ ಅಭ್ಯರ್ಥಿತನವನ್ನು ಸದರಿ ಮೀಸಲಾತಿಯಡಿ ಪರಿಗಣಿಸಲಾಗುವುದಿಲ್ಲ. ನಿಗದಿಪಡಿಸಿದ ನಮೂನೆಯನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಗಳಲ್ಲಿ ಪಡೆಯಲಾದ ಅರ್ಹತಾ ಪ್ರಮಾಣ ಪತ್ರವನ್ನು ತಿರಸ್ಕರಿಸಲಾಗುವುದು.
- ನಿಗದಿಪಡಿಸಿದ ಅರ್ಜಿ ನಮೂನೆಯನ್ನು ಕುಲಸಚಿವರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ-580025 ಇವರಿಂದ ಬೋಧಕೇತರ ಹುದ್ದೆಗಳ ಅರ್ಜಿ ಶುಲ್ಕ ರೂ. 1000/- (ಮರುಪಾವತಿಸಲಾಗದ) ಗಳನ್ನು ಪಾವತಿಸಿ ಅರ್ಜಿಯನ್ನು ಪಡೆದುಕೊಳ್ಳುವುದು (ಅರ್ಜಿ ನಮೂನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಬೇಕು). ಎಸ್.ಸಿ/ಎಸ್.ಟಿ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕ ರೂ. 500/- (ಮರುಪಾವತಿಸಲಾಗದ) ಇರುತ್ತದೆ. ಅಲ್ಲದೇ ಅಂಗವಿಕಲ ಮತ್ತು ದೃಷ್ಟಿಮಾಂದ್ಯ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಲ್ಲಿ ಪೂರ್ಣ ವಿನಾಯಿತಿ ಇರುತ್ತದೆ. ನಿಗದಿತ ಶುಲ್ಕವನ್ನು ಆನ್‌ಲೈನ ಮೂಲಕ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (**SBI Collect**) ಮೂಲಕ ಭರಣಮಾಡಿ ರಶೀತಿಯ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸುವುದು.
- ಅರ್ಜಿಗಳನ್ನು ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಆಯಾ ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಲೇಬೇಕು. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಈ ನಿಗದಿತ ವಿದ್ಯಾರ್ಹತೆಯ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ.
- ವಿದ್ಯಾರ್ಹತೆಗೆ ಸಂಬಂಧಿಸಿದಂತೆ, ಅಂಕಪಟ್ಟಿ/ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಹಾಜರು ಪಡಿಸಬೇಕಾದ ಪ್ರಮಾಣ ಪತ್ರಗಳಾಗಿದ್ದು, ಮೂಲದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಕಡ್ಡಾಯವಾಗಿ ಮೂಲ ಪತ್ರವನ್ನು ಹಾಜರುಪಡಿಸಬೇಕು. ಒಂದುವೇಳೆ ಹಾಜರು ಪಡಿಸದಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.
- ಪೋಸ್ಟಲ್ ಆರ್ಡರ್‌ಗಳು, ಮನಿ ಆರ್ಡರ್‌ಗಳು ಹಾಗೂ ಬ್ಯಾಂಕ್ ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.
- ಭರ್ತಿಮಾಡಿದ ಅರ್ಜಿಯೊಂದಿಗೆ 12”X6” ಅಳತೆಯ ಸ್ವ-ವಿಳಾಸವುಳ್ಳ ಒಂದು ಲಕೋಟೆಯನ್ನು ಇಡುವುದು.

- ಅರ್ಜಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ ಆದ www.kslu.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು ಭರ್ತಿಮಾಡಿ ನಿಗದಿತ ಶುಲ್ಕದೊಂದಿಗೆ ಸಲ್ಲಿಸುವುದು.
- ಭರ್ತಿಮಾಡಿದ ಅರ್ಜಿಯನ್ನು ದಿನಾಂಕ: 29.04.2024 ಒಳಗಾಗಿ ಕುಲಸಚಿವರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ- 580025 ಇವರಿಗೆ ತಲುಪಿಸುವುದು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

---

- ಅರ್ಜಿಯೊಂದಿಗೆ ದೃಢೀಕರಿಸಿ ಲಗತ್ತಿಸಿದ ಶೈಕ್ಷಣಿಕ ಪ್ರಮಾಣ ಪತ್ರಗಳು, ಬಯೋಡಾಟಾ, ಜಾತಿ ಪ್ರಮಾಣ ಪತ್ರ, ಅಂಕಪಟ್ಟಿಗಳು ಹಾಗೂ ಅವುಗಳನ್ನು ಹಿಂದಿರುಗಿಸಲಾಗುವುದಿಲ್ಲ.
- ತಡವಾಗಿ ತಲುಪಿದ ಅಪೂರ್ಣ, ಶುಲ್ಕ ಪಾವತಿ ಮಾಡದ ಹಾಗೂ ಎಂಟು ಸೆಟ್‌ಗಳಿಲ್ಲದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಈ ಬಗೆಗೆ ಅಭ್ಯರ್ಥಿಗೆ ಯಾವುದೇ ಮಾಹಿತಿಯನ್ನು ತಿಳಿಸಲಾಗುವುದಿಲ್ಲ.
- ಪ್ರತಿ ಹುದ್ದೆಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸುವುದು.
- ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವ ಸಮಯದಲ್ಲಿ / ಸಂದರ್ಶನಕ್ಕೆ ಹಾಜರಾಗುವ ಅಥವಾ ನೇಮಕಾತಿಯ ನಂತರ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಸಂದರ್ಭದಲ್ಲಿ ದಿನಭತ್ಯೆ/ಪ್ರಯಾಣ ಭತ್ಯೆಯನ್ನು ವಿಶ್ವವಿದ್ಯಾಲಯವು ಭರಿಸುವುದಿಲ್ಲ.
- ಆಯ್ಕೆಯಾದ ಅಭ್ಯರ್ಥಿಗಳು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿಯ ವ್ಯಾಪ್ತಿಗೊಳಪಟ್ಟ ವಿಶ್ವವಿದ್ಯಾಲಯದ ಆವರಣ, ವಿಶ್ವವಿದ್ಯಾಲಯದ ಇತರೆ ಸ್ನಾತಕೋತ್ತರ ಕೇಂದ್ರ ಹಾಗೂ ವಿಶ್ವವಿದ್ಯಾಲಯದ ಕಾನೂನು ಶಾಲೆಯಲ್ಲಿ ಸೇವೆ ಸಲ್ಲಿಸಲು ಸಿದ್ದರಿರಬೇಕು.
- ಆಯ್ಕೆಯಾದ ಅಭ್ಯರ್ಥಿಗಳಿಗೆ ಸೇವಾ ಪೂರ್ವ ಪರೀಕ್ಷಾವಧಿಯು ಎರಡು ವರ್ಷಗಳಾಗಿರುತ್ತದೆ. ವಿಶ್ವವಿದ್ಯಾಲಯವು ಬಯಸಿದ್ದಲ್ಲಿ ಅದನ್ನು ಮುಂದೂಡಬಹುದು.
- ನಿಗದಿತ ಅರ್ಜಿ ನಮೂನೆಯೊಂದಿಗೆ ನೀಡಲಾದ ಬಯೋಡಾಟಾದ ನಮೂನೆಯನ್ನು ಜಾಗರೂಕತೆಯಿಂದ ಭರ್ತಿಮಾಡಿ ಅರ್ಜಿ ನಮೂನೆ 08 ಸೆಟ್‌ಗಳಲ್ಲಿ ತಪ್ಪದಂತೆ ಲಗತ್ತಿಸಬೇಕು.
- ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರಭಾವ ಬೀರುವ ಅಭ್ಯರ್ಥಿಯ ಅಭ್ಯರ್ಥಿತನವನ್ನು ಅನರ್ಹಗೊಳಿಸಲಾಗುವುದು.
- ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನಮೂದಿಸಲಾದ ಮೀಸಲಾತಿ, ವಿದ್ಯಾರ್ಹತೆ, ವಿಳಾಸ ಹಾಗೂ ಇತರೆ ವಿವರಗಳ ಬಗ್ಗೆ ಹಾಗೂ ಅಂತರದಲ್ಲಿ ಬದಲಾವಣೆ ಕುರಿತಂತೆ ಸಲ್ಲಿಸುವ ಕೋರಿಕೆಗಳನ್ನು ತಿರಸ್ಕರಿಸಲಾಗುವುದು, ಈ ಬಗ್ಗೆ ಅಭ್ಯರ್ಥಿಗಳು ಎಚ್ಚರವಹಿಸತಕ್ಕದ್ದು.
- ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಫೋಟೋ ಪ್ರತಿಯನ್ನು ಕಡ್ಡಾಯವಾಗಿ ತಮ್ಮೊಂದಿಗೆ ಇಟ್ಟುಕೊಳ್ಳಲು ಸೂಚಿಸಿದೆ. ಯಾವುದೇ ಕಾರಣಕ್ಕೂ ವಿಶ್ವವಿದ್ಯಾನಿಲಯದಿಂದ ಅರ್ಜಿಯ ನಕಲು ಪ್ರತಿ ಪಡೆಯಲು ಅವಕಾಶ ಇರುವುದಿಲ್ಲ.
- ಅಭ್ಯರ್ಥಿಗಳು ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾದಲ್ಲಿ ತಮ್ಮ ಅರ್ಜಿಯಲ್ಲಿ ಕೋರಿರುವ ಮೀಸಲಾತಿ ಪ್ರಮಾಣ ಪತ್ರಗಳನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸದಿದ್ದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಗಳನ್ನು ತಿರಸ್ಕರಿಸಲಾಗುವುದು. ಆದುದರಿಂದ, ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ನಿಗದಿತ ನಮೂನೆಯಲ್ಲಿ ಎಲ್ಲಾ ಮೀಸಲಾತಿ ಪ್ರಮಾಣ ಪತ್ರಗಳನ್ನು (ಮೀಸಲಾತಿ ಕೋರಿರುವ) ಪಡೆದಿಟ್ಟುಕೊಂಡಿದ್ದು, ಅರ್ಜಿಯೊಂದಿಗೆ ಸದರಿ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ಹಾಜರುಪಡಿಸತಕ್ಕದ್ದು.
- ನೇಮಕಾತಿ ಪ್ರಕ್ರಿಯೆ ಸ್ಪರ್ಧಾತ್ಮಕ ಪರೀಕ್ಷೆ / ನೇರ ಸಂದರ್ಶನದ ಮೂಲಕ ಅಥವಾ ಸಕ್ಷಮ ಪ್ರಾಧಿಕಾರ ಕಾಲಕಾಲಕ್ಕೆ ನಿರ್ಧರಿಸುವ ನಿಯಮಗಳನ್ವಯ ಪ್ರಕ್ರಿಯೆ ಜರುಗಿಸಲಾಗುವುದು. ಸಕ್ಷಮ ಪ್ರಾಧಿಕಾರದ ನಿರ್ಣಯವೇ ಅಂತಿಮವಾಗಿರುತ್ತದೆ.

- ಈ ಎಲ್ಲ ಹುದ್ದೆಗಳಿಗೆ ನೇಮಕ ಬಯಸುವವರು ಕನ್ನಡ ಭಾಷೆಯ ಸಾಮಾನ್ಯ ಜ್ಞಾನವನ್ನು ಹೊಂದಿರಬೇಕು.
- ಸೇವೆಯಲ್ಲಿರುವ (In-Service) ಅಭ್ಯರ್ಥಿಗಳು ಸೇವಾ ಪ್ರಾಧಿಕಾರದ ಮುಖಾಂತರ ಸಮುಚಿತ ಮಾರ್ಗದಲ್ಲಿ ಅರ್ಜಿ ತಲುಪಬೇಕಾದ ಕೊನೆಯ ದಿನಾಂಕದೊಳಗೆ ಅರ್ಜಿಯನ್ನು ಸಲ್ಲಿಸುವುದು. ಒಂದು ವೇಳೆ ಸಕ್ಷಮ ಪ್ರಾಧಿಕಾರದ ಮೂಲಕ ಅರ್ಜಿಯನ್ನು ಸಲ್ಲಿಸದಿದ್ದರೆ ಸದರಿ ಅರ್ಜಿಯನ್ನು ತಿರಸ್ಕರಿಸಲಾಗುವುದು.
- ಸರ್ಕಾರದ ಆದೇಶ ಸಂ: ಸಿಆಸುಇ 01 ಸೆವಿಮಾ 2022, ಬೆಂಗಳೂರು, ದಿನಾಂಕ: 28-12-2022 ರಲ್ಲಿ ಹೊರಡಿಸಲಾದ ಮೀಸಲಾತಿಯನ್ನು ಸದರಿ ನೇಮಕಾತಿಯಲ್ಲಿ ಅಳವಡಿಸಲಾಗಿದೆ.
- ಸದರಿ ನೇಮಕಾತಿಗಳ ಕುರಿತು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಜಾಲತಾಣ ಆದ www.kslu.karnataka.gov.in ದಲ್ಲಿ ಕಾಲಕಾಲಕ್ಕೆ ಹೊರಡಿಸುವ ಅಧಿಸೂಚನೆ/ಸುತ್ತೋಲೆ/ಪತ್ರಗಳನ್ನು ಅಭ್ಯರ್ಥಿಗಳು ಗಮನಿಸತಕ್ಕದ್ದು.
- ಅಭ್ಯರ್ಥಿಗಳು ನಿಗದಿಪಡಿಸಿದ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು, ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂತಿರುಗಿಸಲಾಗುವುದಿಲ್ಲ ಅಥವಾ ಅದನ್ನು ವಿಶ್ವವಿದ್ಯಾಲಯವು ನಡೆಸುವ ಇತರೆ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ಶುಲ್ಕವನ್ನು ಸಂದಾಯ ಮಾಡದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡುವ ಮೊದಲು ಅಧಿಸೂಚನೆ, ಅರ್ಜಿ ಭರ್ತಿ ಮಾಡುವ ಕುರಿತು ಸೂಚನೆಗಳು, ಅರ್ಹತಾ ಷರತ್ತುಗಳನ್ನು ಓದಿಕೊಂಡು ಅದರಂತೆ, ಭರ್ತಿ ಮಾಡತಕ್ಕದ್ದು.
- ಪ.ಜಾತಿ ಮತ್ತು ಪ.ಪಂಗಡದವರಿಗೆ ಮೀಸಲಾದ ರಿಕ್ತ ಹುದ್ದೆಗಳಿಗೆ ಇತರ ಪ್ರವರ್ಗ ಅಥವಾ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ.
- ಪ.ಜಾತಿ ಮತ್ತು ಪ.ಪಂಗಡದ ಅಭ್ಯರ್ಥಿಗಳು ಇತರೆ ಸಾಮಾನ್ಯ ವರ್ಗಗಳ ರಿಕ್ತ ಹುದ್ದೆಗಳಿಗೆ ಅರ್ಜಿಯನ್ನು ಸಲ್ಲಿಸಬಹುದು.
- ನೇಮಕಾತಿ ಪ್ರಕ್ರಿಯೆಯು ಮುಕ್ತ ಆಯ್ಕೆ ಪ್ರಕ್ರಿಯೆಯ ಪದ್ಧತಿಯನ್ನು ಒಳಗೊಂಡಿರುತ್ತದೆ.
- ಆಯ್ಕೆಯಾದ ಅಭ್ಯರ್ಥಿಯ ನಿವೃತ್ತಿ ಸೌಲಭ್ಯಗಳು ನೂತನ ಪಿಂಚಣಿ ಯೋಜನೆಯ ಸರ್ಕಾರಿ ಆದೇಶ ಸಂಖ್ಯೆ ಎಫ್.ಡಿ (ವಿಶೇಷ) 04ಪಿ.ಇ.ಟಿ 2005, ಬೆಂಗಳೂರು, ದಿನಾಂಕ: 01-01-2006ರ ಅನ್ವಯ ಇರತಕ್ಕದ್ದು ಹಾಗೂ ರಾಜ್ಯ ಸರ್ಕಾರವು ಈ ವಿಷಯವನ್ನು ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ವಯ ಇರತಕ್ಕದ್ದು.
- ವಿಶ್ವವಿದ್ಯಾಲಯವು ನೇಮಕಾತಿ ಅಧಿಸೂಚನೆಯಲ್ಲಿ ಕಾಣಿಸಲಾದ ಹುದ್ದೆಗಳನ್ನು ತುಂಬುವ ಅಥವಾ ತುಂಬದೇ ಇರುವ ಅಧಿಕಾರ ಹಕ್ಕನ್ನು ಕಾಯ್ದಿರಿಸಿರುತ್ತದೆ.
- ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸುವ ದೂರವಾಣಿ ಸಂಖ್ಯೆ: 0836-2222079.

ಆದೇಶಾನುಸಾರ

13/03

ಕುಲಸಚಿವರು